ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 5, March-April, 2024, Pp. 46-52.
©*IIMRD*, Mysuru

IIMRD JOURNALS
www.iimrd.com

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ–2005: ಒಂದು ಅವಲೋಕನ

**ಕಿರಣ್ ಡಿ[1] ಮತ್ತು ಡಾ. ಎಸ್.ಟಿ ರಾಮಚಂದ್ರ[2]**
[1]ಸಂಶೋಧನಾ ವಿದ್ಯಾರ್ಥಿ, ಗಾಂಧಿ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
[2]ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಸಾರಾಂಶ: (Abstract)**

*ಸ್ವಾತಂತ್ರ ನಂತರದಲ್ಲಿ ಭಾರತ ಸರ್ಕಾರವು ಗ್ರಾಮೀಣಾಭಿವೃದ್ಧಿಗೆ ಒಂದು ವಿಶೇಷವಾದಂತಹ ದೂರದೃಷ್ಟಿ ಹೊಂದಿರುವಂತಹ ಯೋಜನೆಯನ್ನು ಹಾಕಿಕೊಳ್ಳಲು ಹಲವಾರು ಸಮಿತಿಗಳನ್ನು ರಚಿಸಿತು. ಈ ಸಮಿತಿಗಳ ಶಿಫಾರಸ್ಸಿನ ಮೇರೆಗೆ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ, ಸ್ವಯಂ ಉದ್ಯೋಗಕ್ಕೆ ಗ್ರಾಮೀಣ ಯುವಜನರ ತರಬೇತಿ ಕಾರ್ಯಕ್ರಮ, ಜವಹರ್ ಲಾಲ್ ರೋಜ್‌ಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ, ಸ್ವರ್ಣಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ, ಜವಾಹರ್ ಲಾಲ್ ಗ್ರಾಮ ಸಮೃದ್ಧಿ ಯೋಜನೆ ಇವೆಲ್ಲ ಯೋಜನೆಗಳ ಅನುಷ್ಠಾನದ ನಂತರ ಭಾರತ ಸರ್ಕಾರವು ಒಂದು ಬೃಹತ್ ಮೊತ್ತದ ಯೋಜನೆಯೊಂದನ್ನು ಜಾರಿಗೊಳಿಸಿತ್ತು. ಅದುವೇ 'ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ–2005' ಪ್ರಸ್ತುತ ಲೇಖನದಲ್ಲಿ ಈ ಯೋಜನೆಯ ಸಾಧಕ–ಬಾಧಕಗಳನ್ನು ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** MGNREGA, ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಇಲಾಖೆ, ಉದ್ಯೋಗ ಸೃಷ್ಟಿ.

## ಪೀಠಿಕೆ

ಭಾರತ ಕೃಷಿ ಆಧಾರಿತ ದೇಶವಾಗಿದೆ. ಗ್ರಾಮೀಣ ಪ್ರದೇಶದ ಶೇ.80 ಕ್ಕೂ ಹೆಚ್ಚು ಕುಟುಂಬಗಳು ಜೀವನ ನಿರ್ವಹಣೆಗೆ ವ್ಯವಸಾಯವನ್ನು ನಂಬಿಕೊಂಡಿವೆ. ಆದರೆ ಮಳೆಯ ಅನಿಶ್ಚಿತತೆಯಿಂದ ವ್ಯವಸಾಯ ಲಾಭದಾಯಕವಾಗಿಲ್ಲದ ಕಾರಣ ಜೀವನ ನಿರ್ವಹಣೆಗೆ ಗ್ರಾಮೀಣ ಪ್ರದೇಶದ ಜನರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಸಲುವಾಗಿ ನಗರ ಪ್ರದೇಶಗಳಿಗೆ ಉದ್ಯೋಗ ಅರಸಿಕೊಂಡು ವಲಸೆ ಹೋಗುವುದು ಸಾಮಾನ್ಯವಾಗಿದೆ. ವಲಸೆಯಿಂದಾಗಿ ಮೂಲ ಕಸುಬುಗಳ ಅವನತಿ, ಸಂಸ್ಕೃತಿಯ ನಾಶ, ಮಕ್ಕಳು ಶೈಕ್ಷಣಿಕ ಕುಂಠಿತ ಹೀಗೆ ಹತ್ತು ಹಲವು ಸಮಸ್ಯೆಗಳು ಎದುರಾಗುತ್ತಿದ್ದವು. ಈ ರೀತಿಯ ಸಮಸ್ಯೆಗಳನ್ನು ಮನಗಂಡ ಕೇಂದ್ರ ಸರ್ಕಾರವು ಮನರೇಗಾ ಎಂಬ ಯೋಜನೆಯನ್ನು ಜಾರಿಗೆ ತಂದಿತ್ತು.

*Please cite this article as:* ಕಿರಣ್ ಡಿ ಮತ್ತು ಎಸ್.ಟಿ ರಾಮಚಂದ್ರ. (2024). ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ–2005: ಒಂದು ಅವಲೋಕನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ,* 5(5). ಪು.ಸಂ. 46–52

ಸ್ವತಂತ್ರ ನಂತರದ ಭಾರತದ ಎಲ್ಲಾ ಗ್ರಾಮೀಣಾಭಿವೃದ್ಧಿ ಯೋಜನೆಗಳ ಸಾಧಕ–ಬಾಧಕಗಳನ್ನು ಗಮನದಲ್ಲಿಟ್ಟುಕೊಂಡು ಬೃಹತ್ ಮೊತ್ತದ ಯೋಜನೆಯನ್ನು ಜಾರಿಗೊಳಿತು. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅಂದಿನ ಯು.ಪಿ.ಎ ಸರ್ಕಾರ ಅಕ್ಟೋಬರ್ 2, 2009 ರಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು '*ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ– MGNREGA*' ಎಂದು ಮರು ನಾಮಕರಣ ಮಾಡಲಾಯಿತು.

## MGNREGA ಯೋಜನೆಯ ಲಕ್ಷಣಗಳು

ಪ್ರಪಂಚದಲ್ಲಿಯೇ ಒಂದು ದೊಡ್ಡ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮವಾದ *MGNREGA* ಯೋಜನೆಯು ತನ್ನದೇಯಾದ ಪ್ರಮುಖ ಲಕ್ಷಣಗಳನ್ನು ಹೊಂದಿದೆ. ಅವುಗಳೆಂದರೆ ಪ್ರತಿ ಗ್ರಾಮ ಪಂಚಾಯತಿಗಳ ವ್ಯಾಪ್ತಿಯಲ್ಲಿ ವಾಸಿಸುವ ಪ್ರತಿ ಕುಟುಂಬದ ಒಬ್ಬ ವ್ಯಕ್ತಿಗೆ ಅಂದರೆ 18 ವರ್ಷ ಮೇಲ್ಪಟ್ಟ ಆರೋಗ್ಯವಂತ ವ್ಯಕ್ತಿಯು ಉದ್ಯೋಗ ಪಡೆಯಲು ಅರ್ಜಿಸಲ್ಲಿಸಬಹುದಾಗಿದೆ, ಉದ್ಯೋಗ ಖಾತ್ರಿ ಯೋಜನೆಯಾಡಿಯಲ್ಲಿ ಅರ್ಜಿ ಸಲ್ಲಿಸಿದ ವ್ಯಕ್ತಿಗೆ 15 ದಿನಗಳ ಒಳಗಾಗಿ ಉದ್ಯೋಗವನ್ನು ನೀಡಬೇಕು, ಇಲ್ಲವಾದಲ್ಲಿ ನಿರುದ್ಯೋಗ ಭತ್ಯೆಯನ್ನು ನೀಡಬೇಕಾಗುತ್ತದೆ. ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಪಂಚಾಯಿತಿಗಳು ಆರ್ಥಿಕ ವರ್ಷದಲ್ಲಿ 100 ದಿನಗಳ ಉದ್ಯೋಗವನ್ನು ದೊರಕಿಸಿಕೊಡುವುದು ಈ ಯೋಜನೆಯ ಮುಖ್ಯ ಧ್ಯೇಯವಾಗಿದೆ. ಉದ್ಯೋಗ ಪಡೆದ ವ್ಯಕ್ತಿಗೆ ವಾರಕ್ಕೊಮ್ಮೆ ಅಥವಾ 15 ದಿನಗಳ ಒಳಗೆ ಕೂಲಿ ಹಣವನ್ನು ಆತನ ಬ್ಯಾಂಕ್ ಖಾತೆಗೆ ಜಮಾ ಮಾಡಬೇಕು. ಕೆಲಸ ಮಾಡುವ ಸ್ಥಳವು ಸ್ವಂತ ಸ್ಥಳದಿಂದ 5 ಕಿಲೋ ಮೀಟರ್ ವ್ಯಾಪ್ತಿಯ ಒಳಗಿರಬೇಕು. ಇಲ್ಲವಾದರೆ ಕೂಲಿ ಕಾರ್ಮಿಕನಿಗೆ ಶೇ.10ರಷ್ಟು ಹೆಚ್ಚುವರಿಯಾಗಿ ಸಾರಿಗೆ ಭತ್ಯೆಯನ್ನು ನೀಡಬೇಕು. ಕೆಲಸದ ಸಮಯದಲ್ಲಿ ಕೂಲಿ ಕಾರ್ಮಿಕರಿಗೆ ವಿಶ್ರಾಂತಿಗಾಗಿ ನೆರಳಿನ ವ್ಯವಸ್ಥೆ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಶಿಶುಪಾಲನೆ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇತ್ಯಾದಿ ಸೌಕರ್ಯಗಳನ್ನು ಒದಗಿಸಬೇಕು. ಅಂಗವಿಕಲರು, ವಯೋವೃದ್ಧರಿಗೆ ಕೆಲವು ರಿಯಾಯತಿಗಳನ್ನು ಕಲ್ಪಿಸಿಕೊಡಬೇಕು, ಅವರಿಗೆ 5 ಕಿ.ಮೀ ದೂರದ ಕೆಲಸ ನೀಡಿದರೆ ಕೂಲಿ ಹಣದಲ್ಲಿ ಹೆಚ್ಚುವರಿಯಾಗಿ ಶೇಕಡ 20 ರಷ್ಟು ಹಣವನ್ನು ಪಡೆಯಲು ಅವಕಾಶವಿರುತ್ತದೆ. ಉದ್ಯೋಗ ಖಾತ್ರಿ ಯೋಜನೆಯಲ್ಲಿ ಲಿಂಗತಾರತಮ್ಯ ಮಾಡುವಂತಿಲ್ಲ, ಸಮಾನ ಕೂಲಿ ನೀಡಬೇಕಾಗಿರುತ್ತದೆ. ಈ ಯೋಜನೆಯು ಆಯಾ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ ಜವಾಬ್ದಾರಿಯಾಗಿರುತ್ತದೆ.

**ಕೋಷ್ಟಕ 1: ರಾಜ್ಯವಾರು ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯ ಕೂಲಿಯ ದರಗಳು**

| ರಾಜ್ಯಗಳು | ಕೂಲಿ ದರ | | |
|---|---|---|---|
| | **2021–22** | **2020–21** | **ವ್ಯತ್ಯಾಸ (ಹೆಚ್ಚಳ)** |
| ಆಂಧ್ರ ಪ್ರದೇಶ | 245 | 237 | 8(3.4) |
| ಅರುಣಾಚಲ ಪ್ರದೇಶ | 212 | 205 | 7(3.4) |
| ಅಸ್ಸಾಂ | 224 | 213 | 11(5.2) |
| ಬಿಹಾರ | 198 | 194 | 4(2.1) |

| | | | |
|---|---|---|---|
| ಛತ್ತೀಸ್‌ಗಡ | 193 | 190 | 3(1.6) |
| ಗೋವಾ | 294 | 280 | 14(5.0) |
| ಗುಜರಾತ್ | 229 | 224 | 5(2.2) |
| ಹರಿಯಾಣ | 315 | 309 | 6(1.9) |
| ಹಿಮಾಚಲ ಪ್ರದೇಶ | 254 | 248 | 6(2.4) |
| ಜಮ್ಮು & ಕಾಶ್ಮೀರ | 214 | 204 | 10(4.9) |
| ಲಡಾಕ್ | 214 | 204 | 10(4.9) |
| ಜಾರ್ಖಂಡ್ | 198 | 194 | 4(2.1) |
| **ಕರ್ನಾಟಕ** | **289** | **275** | **14(5.1)** |
| ಕೇರಳ | 291 | 291 | 0(0) |
| ಮಧ್ಯಪ್ರದೇಶ | 193 | 190 | 3(1.6) |
| ಮಹಾರಾಷ್ಟ್ರ | 248 | 238 | 10(4.2) |
| ಮಣಿಪುರ | 251 | 238 | 13(5.5) |
| ಮೇಘಾಲಯ | 226 | 203 | 23(11.3) |
| ಮೀಜೋರಾಂ | 233 | 225 | 8(3.6) |
| ನಾಗಾಲ್ಯಾಂಡ್ | 212 | 205 | 7(3.4) |
| ಒಡಿಶಾ | 215 | 207 | 8(3.9) |
| ಪಂಜಾಬ್ | 269 | 263 | 6(2.3) |
| ರಾಜಸ್ಥಾನ | 221 | 220 | 1(0.5) |
| ಸಿಕ್ಕಿಂ | 212 | 205 | 7(3.4) |
| ತಮಿಳುನಾಡು | 273 | 256 | 17(6.6) |
| ತೆಲಂಗಾಣ | 245 | 237 | 8(3.4) |
| ತ್ರಿಪುರ | 212 | 205 | 7(3.4) |
| ಉತ್ತರಪ್ರದೇಶ | 204 | 201 | 3(1.5) |
| ಉತ್ತರಖಂಡ್ | 204 | 201 | 3(1.5) |
| ಪಶ್ಚಿಮ ಬಂಗಾಳ | 213 | 204 | 9(4.4) |

## MGNREGA ಯೋಜನೆಯ ಉದ್ದೇಶಗಳು

ಈ ಯೋಜನೆಯ ಪ್ರಮುಖ ಗುರಿ ಉದ್ದೇಶಗಳೆಂದರೆ

- ಪ್ರತಿಯೊಂದು ಕುಟುಂಬಕ್ಕೆ ಕನಿಷ್ಠ 100 ದಿನ ಉದ್ಯೋಗ ದೊರಕಿಸಿ ಕೊಡುವುದು.
- ವೇತನ ಗಳಿಕೆಯ ಸಾಮರ್ಥ್ಯವನ್ನು ಉತ್ತಮಗೊಳ್ಳಿಸುವುದು ಮತ್ತು ಕನಿಷ್ಠ ವೇತನದ ಮೇಲೆ ಪರಿಣಾಮ ಬೀರುವುದು.
- ಗ್ರಾಮೀಣ ಬಡವರ್ಗದ ಜನರ ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸುವುದು

- ಲಿಂಗ ತಾರತಮ್ಯವಿಲ್ಲದೆ ಸಮಾನ ಕೂಲಿ ನೀಡಬೇಕು.
- ವಲಸೆ ತಪ್ಪಿಸುವುದು
- ಗ್ರಾಮೀಣ ಪ್ರದೇಶಗಳಲ್ಲಿ ದೀರ್ಘಾಕಾಲಿಕ ಬಾಳಿಕೆ ಬರುವ ಮತ್ತು ಸಂಪನ್ಮೂಲಗಳನ್ನು ಆಸ್ತಿ ನಿರ್ಮಾಣ ಮಾಡಿಕೊಡುವುದು.
- ಪರಿಸರ ಸಂರಕ್ಷಣೆಗೆ ಒತ್ತು ನೀಡುವುದು.
- ಸ್ಥಳೀಯ ಸಂಪನ್ಮೂಲಗಳನ್ನು ಸದ್ಬಳಕೆ ಮಾಡಿಕೊಳ್ಳವುದು ಇವೇ ಮೊದಲಾದ ಗುರಿ ಉದ್ದೇಶಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಹೊಂದಿದೆ.

**ನರೇಗಾ ಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳ ವಿವರಗಳು**

ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವ ಮೂಲ ಉದೇಶವನ್ನು ಇಟ್ಟುಕೊಂಡು ಸ್ಥಾಪನೆಯಾಗಿರುವ MGNREGA ಗ್ರಾಮೀಣ ಪ್ರದೇಶಗಳಲ್ಲಿ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಹೆಚ್ಚಿನ ಗಮನವನ್ನು ನೀಡಿದೆ ಅವುಗಳೆಂದರೆ, ಜಲ ಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು, ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ), ನೀರಾವರಿ (ಕಾಲುವೆಗಳು, ಕಿರು ಮತ್ತು ಸಣ್ಣ ನೀರಾವರಿ ಕಾಲುವೆಗಳು ಸೇರಿದಂತೆ), ನೀರಾವರಿ ಸೌಲಭ್ಯ, ನೀರಿನ ಮೂಲಗಳ ಪುನಶ್ಚೇತನ, ಜಮೀನಿನ ಅಭಿವೃದ್ಧಿ, ನೆರೆ(ಪ್ರವಾಹ) ನಿಯಂತ್ರಣ ಮತ್ತು ತಡೆಗಟ್ಟುವುದು, ಸರ್ವಋತು ಗ್ರಾಮೀಣ ರಸ್ತೆ ನಿರ್ಮಾಣ.

**ಜಲ ಸಂರಕ್ಷಣೆ ಮತ್ತು ಮಳೆ ನೀರು ಕೂಯ್ಲು**

ಅಂತರ್ಜಲ ಮಟ್ಟ ದಿನೇ ದಿನೇ ಕುಸಿಯುತ್ತಾ ಕುಡಿಯುವ ನೀರು ಮತ್ತು ಕೃಷಿ ಚಟುವಟಿಕೆಗಳಿಗೆ ನೀರಿನ ಕೊರತೆ ಭಯಾನಕವಾಗಿ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ಜಲಸಂರಕ್ಷಣೆ ಮತ್ತು ಮಳೆ ನೀರು ಕೊಯ್ಲು ಕಾಮಗಾರಿಗಳಿಗೆ ಮೊದಲು ಆದ್ಯತೆ ನೀಡಬೇಕು. ಕೆರೆ, ಅಣೆಕಟ್ಟೆ ಜಿನುಗಿ ನಿರ್ಮಾಣ ಶಾಲೆಗಳಲ್ಲಿ ಮತ್ತು ಆರ್ಥಿಕವಾಗಿ ಹಿಂದೂಳಿದ ವರ್ಗಗಳ ಮನೆಗಳಲ್ಲಿ ಮಳೆ ನೀರು ಕೂಯ್ಲು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

**ಬರಗಾಲ ತಡೆಗಟ್ಟುವಿಕೆ (ಅರಣ್ಯೀಕರಣ)**

ಶಾಲೆಗಳು, ಕಾಲುವೆ ಆಸು–ಪಾಸು, ಕೆರೆಗಳ ಸುತ್ತ ಖಾಲಿ ಪ್ರದೇಶಗಳು, ಗೋಮಾಳಗಳಲ್ಲಿ ಗಿಡಗಳನ್ನು ನೆಡುವುದು, ಸಾಮಾಜಿಕ ಅರಣ್ಯ ಪ್ರದೇಶಗಳನ್ನು ಅಭಿವೃದ್ಧಿಗೊಳ್ಳಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ನರ್ಸರಿಗಳಲ್ಲಿ ಆರಂಭಿಸುವುದು ಇವೇ ಮೊದಲಾದ ಕಾರ್ಯಗಳಿಂದ ಜನರಲ್ಲಿ ಗಿಡ ನೆಡುವ ಮನೋಭಾವವನ್ನು ಮೂಡಿಸುವುದು.

**ನೀರಾವರಿ:**

ಕಾಲುವೆಗಳು, ಕಿರು ಮತ್ತು ಸಣ್ಣ ನೀರಾವರಿ ಕಾಲುವೆಗಳು ಸೇರಿದಂತೆ ಹೊಸದಾಗಿ ನಿರ್ಮಾಣವಾಗುವ ಕಾಲುವೆಗಳು ಮತ್ತು ದುಸ್ಥಿತಿಯಲ್ಲಿರುವ ಕಾಲುವೆಗಳನ್ನು ದುರಸ್ಥಿಗೊಳ್ಳಿಸುವುದು. ಇವುಗಳಿಂದ ನೀರನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ಯಶಸ್ಸುಗಳಿಸಬಹುದಾಗಿದೆ.

**ಕೋಷ್ಟಕ 2: ಮಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳು**

| ಕ್ರ.ಸಂ | ಕಾಮಗಾರಿಗಳು |
|---|---|
| 1 | ಭೂ ಅಭಿವೃದ್ಧಿ (ಜಮೀನು ಸಮತಟ್ಟು) |
| 2 | ಕುರಿ/ ದನದ ದೊಡ್ಡಿ ನಿರ್ಮಾಣ |
| 3 | ಕೃಷಿ ಹೊಂಡ ನಿರ್ಮಾಣ |
| 4 | ಶೌಚಾಲಯದ ಸುತ್ತ ಗಿಡ ನೆಡುವುದು |
| 5 | ಕೊಳವೆ ಬಾವಿಗಳ ಮರು ಪೂರಣ ಘಟಕ (ವೈಯಕ್ತಿಕ) |
| 6 | ಎರೆಹುಳು ಗೊಬ್ಬರ ಗುಂಡಿ |
| 7 | ಹಂದಿ ಶೆಡ್ಡು |
| 8 | ಕೋಳಿ ಶೆಡ್ಡು |
| 9 | ರೈತರ ಜಮೀನಿನಲ್ಲಿ ಗಿಡ ನೆಡುವುದು |
| 10 | ಮೀನು ಕೊಳ |
| 11 | ಬದು ನಿರ್ಮಾಣ |
| 12 | ಬಾವಿ ಅಭಿವೃದ್ಧಿ |
| 13 | ರೈತರ ಹಣ |
| 14 | ಆಟದ ಮೈದಾನ |
| 15 | ಸ್ಮಶಾನ ಅಭಿವೃದ್ಧಿ |
| 16 | ಚೆಕ್ ಡ್ಯಾಮ್‌ಗಳ ನಿರ್ಮಾಣ |
| 17 | ಕೊಳವೆ ಬಾವಿಗಳ ಮರುಪೂರಣ ಘಟಕ (ಸಮುದಾಯ) |
| 18 | ಕಲ್ಯಾಣಿ ಅಭಿವೃದ್ಧಿ |
| 19 | ರಾಜೀವ್ ಗಾಂಧಿ ಸೇವಾ ಕೇಂದ್ರ |
| 20 | ಗ್ರಾಮೀಣ ಗೋದಾಮುಗಳು |
| 21 | ಕಾಲುವೆ ಅಭಿವೃದ್ಧಿ |
| 22 | ಗ್ರಾಮೀಣ ಉದ್ಯಾನ ನಿರ್ಮಾಣ |
| 23 | ಜಾನುವಾರು ನೀರಿನ ತೊಟ್ಟಿ |
| 24 | ಗೋ ಕಟ್ಟೆ |
| 25 | ಮಣ್ಣಿನ ರಸ್ತೆ |
| 26 | ಸಿಮೆಂಟ್ ರಸ್ತೆ |
| 27 | ರಸ್ತೆ ಬದಿಗಳಲ್ಲಿ ಗಿಡ ನೆಡುವುದು |
| 28 | ಗ್ರಾಮೀಣ ಸಂತೆ |
| 29 | ಸ್ವ–ಸಹಾಯ ಸಂಘಗಳಿಗೆ ಶೆಡ್ಡು ನಿರ್ಮಾಣ |
| 30 | ಸಮುದಾಯ ಕುರಿಶೆಡ್ಡು |
| 31 | ವೈಯಕ್ತಿಕ ಶೌಚಾಲಯ |
| 32 | ಶಾಲಾ ಶೌಚಾಲಯ |

**MGNREGA ಯೋಜನೆಯ ಸಫಲತೆಗಳು ಮತ್ತು ವಿಫಲತೆಗಳು**

MGNREGA ಯೋಜನೆಯಿಂದ ಅನೇಕ ರೀತಿಯ ಅನುಕೂಲಗಳಾಗಿವೆ. ಅವುಗಳಲ್ಲಿ ಪ್ರಮುಖವಾಗಿ ಈ ಯೋಜನೆಯಿಂದ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಸಹಕಾರಿಯಾಗಿದೆ. ಇದಲ್ಲದೆ ಈ ಯೋಜನೆಯಿಂದ ವಲಸೆ ಹೋಗುವವರ ಪ್ರಮಾಣ ತಗ್ಗಿದ್ದು, ಸ್ಥಳೀಯವಾಗಿ ಕೂಲಿ ದೊರೆಯುವುದ್ದರಿಂದ ಗ್ರಾಮೀಣ ಜನರ ಆರ್ಥಿಕ ಮಟ್ಟ ಸುಧಾರಣೆಯಾಗಿದೆ. ಈ ಯೋಜನೆಯಿಂದ ಅನೇಕ ಗ್ರಾಮೀಣ ಕುಟುಂಬಗಳು ಪ್ರಾಣಿ ಸಾಕಾಣಿಕೆಗೆ ಕೊಟ್ಟಿಗೆ/ದೊಡ್ಡಿಗಳನ್ನು ನಿರ್ಮಿಸಿಕೊಂಡಿವೆ. ಸಮಾನ ಕೂಲಿಗೆ ಸಮಾನ ವೇತನ ನೀಡುವುದ್ದರಿಂದ ಹೆಣ್ಣು–ಗಂಡು ಎಂಬ ಬೇಧಭಾವ ತಗ್ಗಿದೆ. ಈ ಯೋಜನೆಯಡಿ ವೃದ್ಧರಿಗೆ, ಅಂಗವಿಕಲರಿಗೆ, ಅಶಕ್ತರಿಗೆ ದುಡಿಯುವ ಅವಕಾಶ ಕಲ್ಪಿಸಲಾಗುತ್ತದೆ. ಇವರು ಅರ್ಧ ದಿನ ದುಡಿದರೂ ಪೂರ್ಣ ಕೂಲಿ ನೀಡುವುದ್ದರಿಂದ ಅಂಗವಿಕಲರು ಹಾಗೂ ವೃದ್ಧರು ಸ್ವಾಭಿಮಾನದಿಂದ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಈ ಯೋಜನೆಯಲ್ಲಿ ಮಧ್ಯವರ್ತಿಗಳ ಹಾವಳಿ ಇಲ್ಲದಿರುವುದು ಹಾಗೂ ಗುತ್ತಿಗೆದಾರರಿಗೆ ಅವಕಾಶವಿಲ್ಲದಿರುವುದ್ದರಿಂದ ಇವರು ದುಡಿದ ಸಂಪೂರ್ಣ ಹಣ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗುತ್ತದೆ.

**ವಿಫಲತೆಗಳು**

ಈ ಯೋಜನೆಯಡಿ ಅನುಕೂಲಗಳಿವೆಯಾದರೆ ಅನೇಕ ಕಾರಣಗಳಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವಲ್ಲಿ ಅನೇಕ ಅಡೆತಡೆಗಳಿವೆ. ಈ ಯೋಜನೆಗಳು ಜಾರಿಗೆ ಬಂದು ದಶಕಗಳೇ ಕಳೆದಿದ್ದರೂ ಕೂಡ ಗ್ರಾಮೀಣ ಜನರಿಗೆ ಈ ಯೋಜನೆಯ ಅರಿವು ಹೆಚ್ಚಿಲ್ಲ. ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಹಾಗೂ ಪ್ರತಿನಿಧಿಗಳ ನಿರ್ಲಕ್ಷ್ಯ ಹಾಗೂ ಆಸಕ್ತಿಯ ಕೊರತೆಯಿಂದ ಈ ಯೋಜನೆ ಕುಂಟುತ್ತಾ ಸಾಗುತ್ತಿದೆ. ಗ್ರಾಮೀಣ ಪ್ರದೇಶದ ಜನರು ಅನಕ್ಷರಸ್ಥರಾಗಿರುವ ಕಾರಣ ಅವರು ದುಡಿದಂತೆ ದಾಖಲೆ ಸೃಷ್ಟಿಸಿ ಖಾತೆಗೆ ಹಣ ಜಮೆ ಮಾಡಿ ಅಧಿಕಾರಿಗಳು ಮತ್ತು ಸದಸ್ಯರು ಮರಳಿ ಫಲಾನುಭವಿಗಳಿಂದ ಮರಳಿ ಪಡೆದುಕೊಳ್ಳುತ್ತಿರುವುದು ಕೂಡ ಕಂಡು ಬರುತ್ತದೆ. ಹೀಗೆ ಅನೇಕ ಅಡೆತಡೆಗಳ ನಡುವೆಯೂ ಕೂಡ ಮಹತ್ವದ ಯೋಜನೆ ಇದಾಗಿದೆ. ಕೋವಿಡ್ ಸಂದರ್ಭದಲ್ಲಿ ಗ್ರಾಮೀಣ ಜನರು ಜೀವನ ನಿರ್ವಹಿಸಲು ಅನುಕೂಲವಾದುದು ಈ ಯೋಜನೆಯ ಮಹತ್ವತೆಗೆ ತಾಜಾ ಉದಾಹರಣೆಯಾಗಿದೆ.

**ಉಪಸಂಹಾರ**

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಒಂದು ಉತ್ತಮವಾದ ಬೃಹತ್ ಮೊತ್ತದ ಯೋಜನೆಯಾಗಿದೆ. ಈ ಯೋಜನೆಯನ್ನು ಸಮರ್ಪಕವಾಗಿ ಬಳಸಿಕೊಂಡ ಪಕ್ಷದಲ್ಲಿ ಖಂಡಿತವಾಗಿಯೂ ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಬಹುದು. ಅದರೆ ಕೆಲವು ತಾಂತ್ರಿಕ ಸಮಸ್ಯೆ, ಆಡಳಿತ ವರ್ಗದವರ ಬೇಜವಾಬ್ದಾರಿಗಳಿಂದ ಈ ಯೋಜನೆಯು ಅಂದುಕೊಂಡಷ್ಟು ಯಶಸ್ಸನ್ನು ಸಾಧಿಸುತ್ತಿಲ್ಲ ಎಂಬುವುದು ಅಕ್ಷರಶ: ಸತ್ಯ ಅದ್ದುದರಿಂದ ಈ ಯೋಜನೆಯನ್ನು ಯಶಸ್ಸುಗೊಳ್ಳಿಸುವುದು ಭಾರತ ಪ್ರಜೆಗಳಾದ ನಮ್ಮೆಲ್ಲರ ಜವಾಬ್ದಾರಿ ಎಂದು ತಿಳಿದು ಗ್ರಾಮೀಣಾಭಿವೃದ್ಧಿ ಸಾಧಿಸುವುದು ಅನಿವಾರ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ್, ಕೆ. *ಅಭಿವೃದ್ಧಿ ಪಥದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು.* ದೀಪ ಪಬ್ಲಿಕೇಷನ್ಸ್.
- ನಾರಾಯಣ ಸ್ವಾಮಿ, ಕೆ.ಎಸ್. (1979). *ಲೋಕನೀತಿ ಸರ್ವೋದಯ* ಮತ್ತು *ಕೆ.ಶ್ರೀನಿವಾಸ ರಾವ್ ರಾಜ್ಯಶಾಸ್ತ್ರ.* ಸಂಬೋಧ ಮುದ್ರಣಾಲಯ.
- ಒಡೆಯರ್ ಡಿ. ಹೆಗ್ಗಡೆ. (2007). *ಭಾರತೀಯ ಆರ್ಥಿಕ ಚಿಂತಕರು.* ಲಕ್ಷ್ಮೀ ಪ್ರಿಂಟಿಂಗ್ ಹೌಸ್.
- ತಳವಾರ, ಎನ್.ಎಂ. (2013). *ಕನ್ನಡ ವಿಶ್ವಕೋಶ.* (ಪರಿಷ್ಕೃತ ವಿಸ್ತೃತ ಆವೃತ್ತಿ). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ. ಸಂ.6.
- Basu, A. K. (2013). Impact of rural employment guarantee schemes on seasonal labor markets: optimum compensation and workers' welfare. *The Journal of Economic Inequality*, 11(1), 1-34.
- Kamath, R. (2010). National rural employment guarantee act: An effective safety net?. *IIMB Management Review*, 22(1), 42-55.
- Maiorano, D. (2014). The politics of the Mahatma Gandhi National Rural Employment Guarantee Act in Andhra Pradesh. *World Development*, *58*, 95–105. https://doi.org/10.1016/j.worlddev.2014.01.006
- Reddy, D. K., Reddy, A. a. A., & Bantilan, M. C. S. (2014). The impact of Mahatma Gandhi National Rural Employment Guarantee Act (MGNREGA) on rural labor markets and agriculture. *India Review*, *13*(3), 251–273. https://doi.org/10.1080/14736489.2014.937271